ಜನಪದ ಕತೆಗಳೆಂದರೆ ಕೇವಲ ಕತೆಗಳಲ್ಲ, ಒಂದು ನಾಡಿನ ಆತ್ಮ ವೃತ್ತಾಂತಗಳು. ಅವು ಮನುಕುಲದ ಕನಸಿನ ಸಾಕಾರ ರೂಪಗಳು. ಕತೆಗಾರನ ಅಪೇಕ್ಷೆ ಒಂದು ಸಮುದಾಯದ ಅಪೇಕ್ಷೆಯಾಗಿ ಕತೆಗಳಲ್ಲಿ ಒಡಮೂಡುತ್ತದೆ. ಈ ಕತೆಗಳು ಪ್ರಜಾಪ್ರಭುತ್ವವನ್ನು ಬೋಧಿಸುವ ಸೂತ್ರಗಳಾಗಿರುತ್ತವೆ. ಒಂದು ನಾಡಿನ ಜ್ಞಾನಪರಂಪರೆಯನ್ನು ಬಾಯಿಂದ ಬಾಯಿಗೆ ತಲುಪಿಸುವ ಮೂಲಕ ಸಾರ್ವಕಾಲಿಕ ಸತ್ಯವೊಂದನ್ನು ಸದಾ ಕಾಪಾಡುವ ಜೀವವಾಹಕಗಳಾಗಿವೆ. ಪ್ರಕೃತಿ ಮತ್ತು ಮನುಷ್ಯನ ನಡುವಿನ ಸಂಬಂಧವನ್ನು ಗಾಢಗೊಳಿಸುವ ಪಾಠಗಳಾಗಿವೆ. ಜಗತ್ತಿನ ಚರಾಚರ ಪ್ರಾಣಿ ಸಂಕುಲಕ್ಕೂ ಬದುಕುವ ಹಕ್ಕಿದೆ ಎಂಬ ಮೂಲಭೂತ ವಿವೇಕವನ್ನು, ನಿಸರ್ಗದ ಬಗ್ಗೆ ಮನುಷ್ಯನಿಗೆ ಇರಬೇಕಾದ ಜವಾಬ್ದಾರಿಯನ್ನು ಹೇಳುವ ಕತೆಯೊಂದು ಇಲ್ಲಿದೆ.

